ಅ.ದಾ. ಸಂಃ 172/2010 ಪಿ.ಡಬ್ಲ್ಯು: 01

ದಿನಾಂಕಃ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಕೆ.ಆರ್.ಎಸ್. ಪ್ರತಿವಾದಿ ಪರ ವಕೀಲರಿಂದಃ

ದಿಃ 30.05.2023 ರ ಮೆಮೋ ವನ್ನು ನಮ್ಮ ವಕೀಲರು ನ್ಯಾಯಾಲಯಕ್ಕೆ ನೀಡಿರುತ್ತಾರೆ ಎಂದರೆ ಸರಿ. ಮೆಮೋ ಜೊತೆ ವಂಶವೃಕ್ಷವನ್ನು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ್ ಓದಲು ಬರುತ್ತದೆ. ನನ್ನ ಗಂಡ ರಮೇಶ್ ತಯಾರು ಮಾಡಿದ ವಂಶವೃಕ್ಷವನ್ನು ನನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ವಂಶವೃಕ್ಷದಲ್ಲಿ ನನ್ನ ಗಂಡನ ಸಹಿ ಇಂಗ್ಲೀಷ್ ನಲ್ಲಿ ಮಾಡಿರುತ್ತಾರೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಂಡ ಇಂಗ್ಲೀಷ್ ನಲ್ಲೇ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸದಿದ್ದರು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದನೇ ವಾದಿಗೆ ಮಕ್ಕಳಿಲ್ಲದ ಕಾರಣ, ವಂಶವೃಕ್ಷವನ್ನು ಸೃಷ್ಟೀ ಮಾಡಿ ನ್ಯಾಯಾಲಯುಕ್ಕೆ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು